# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಹೊನ್ನೇಶ, ಅಂದಿನ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸುರಪುರ ಇವರ ವಿರುದ್ಧ ಶಿಸ್ತು ಕ್ರಮ - ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತ-1 ರವರಿಗೆ ವಹಿಸುವ ಬಗ್ಗೆ - ಆದೇಶ.

ಓದಲಾಗಿದೆ:- 1) ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ. Compt/ Uplok/ GLB-1457/2013/ DRE-3 ದಿನಾಂಕ. 26.09.2016.

2) ಮಾನ್ಯ ಉಪ ಲೋಕಾಯುಕ್ತ-1ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರಡಿಯಲ್ಲಿ ಸಲ್ಲಿಸಿರುವ ವರದಿ ಸಂಖ್ಯೆ Compt/ Uplok/ GLB-1457/2013/DRE-3 ದಿನಾಂಕ. 21.09.2016.

-----

**ಪ್ರಸ್ತಾವನೆ**

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ರವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 26.09.2016ರ ಪತ್ರದ ಜೊತೆ ಮಾನ್ಯ ಉಪಲೋಕಾಯುಕ್ತ-1ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಸೆಕ್ಷನ್ 12 (3) ರನ್ವಯ ನೀಡಿರುವ ವರದಿಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕಳುಹಿಸುತ್ತಾ, ಮಾನ್ಯ ಉಪ ಲೋಕಾಯುಕ್ತ-1ರವರ ಶಿಫಾರಸ್ಸಿನಂತೆ ಕ್ರಮವಹಿಸಲು ಕೋರಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತ-1ರವರು ಲೋಕಾಯುಕ್ತ ಕಾಯ್ದೆ ಕಲಂ 12 (3)ರಂತೆ ಸಲ್ಲಿಸಿರುವ ವರದಿ ಹಾಗೂ ಲಗತ್ತಿಸಿರುವ ದಾಖಲೆಗಳನ್ನು ಪರಿಶೀಲಿಸಿದೆ. ಶ್ರೀ ವೆಂಕಟೇಶ ನಾಯಕ ತಂದೆ ಸಿದ್ದಣ್ಣ ಸಾ// ಬೈರಿಮುಡ್ಡಿ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ ಇವರು ಸುರಪುರ ತಾಲ್ಲೂಕಿನ ಬೈರಮುಡಿ ಗ್ರಾಮದ ಕೆರೆಯ ಹೂಳೆತ್ತುವ / ಕಲ್ಲು ಹಾಸುವ / ಕಾಲುವೆ ನಿರ್ಮಾಣ ಕಾಮಗಾರಿಗಳನ್ನು ಅನುಷ್ಠಾನಗೊಳಿಸದೇ ಬೋಗಸ್ ಬಿಲ್ಲುಗಳನ್ನು ಪಾಸ್ ಮಾಡಲು ಶ್ರೀ ಹೊನ್ನೇಶ, ಅಂದಿನ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸುರಪುರ ಇವರು ರೂ. 25,000/- ಗಳು ಅಕ್ರಮ ಹಣವನ್ನು ಪಡೆದಿರುತ್ತಾರೆಂದು, ಸದರಿಯವರು ಎಂ.ಜಿ.ಎನ್.ಆರ್.ಇ.ಜಿ. ಯೋಜನೆ, ಬಿ.ಆರ್.ಜಿ.ಎಫ್. ಹಾಗೂ 13ನೇ ಹಣಕಾಸು ಯೋಜನೆಗಳಡಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳಲ್ಲಿ ಹಣ ದುರುಪಯೋಪಡಿಸಿಕೊಂಡಿರುತ್ತಾರೆಂದು ಹಾಗೂ ಶ್ರೀ ಬಸವರಾಜ ಕೆರೊಳ್ಳಿ, ಕ್ರಿಯೇಟಿವ್ ಟೆಕ್ನಿಕಲ್ ಕನ್ಸಲ್ಟಂಟ್ಸ್ (ಮೂರನೇ ಪಾರ್ಟಿ) ಇವರು ಹಣವನ್ನು ಪಡೆದು ಸುಳ್ಳು 3ನೇ ಪಾರ್ಟಿ ತಪಾಸಣಾ ವರದಿಯನ್ನು ನೀಡಿರುತ್ತಾರೆಂದು ತಿಳಿಸಿ, ಸದರಿಯವರುಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ಕರ್ನಾಟಕ ಲೋಕಾಯುಕ್ತ ಕಚೇರಿಯಲ್ಲಿ ದೂರನ್ನು ಸಲ್ಲಿಸಿರುತ್ತಾರೆ.

ಶ್ರೀ ಹೊನ್ನೇಶ, ಅಂದಿನ ಕಿರಿಯ ಇಂಜಿನಿಯರ್ ಇವರು ಸಲ್ಲಿಸಿರುವ ಹೇಳಿಕೆಯಲ್ಲಿ ದೂರಿನಲ್ಲಿ ಮಾಡಿರುವ ಆರೋಪಗಳನ್ನು ಅಲ್ಲಗಳೆದಿದ್ದಾರೆಂದು, ಪ್ರಶ್ನಿತ ಕಾಮಗಾರಿಯನ್ನು ನಿರ್ವಹಿಸಿರುವ ಬಗ್ಗೆ ವಿವರಣೆ ನೀಡಿ, ತಮ್ಮ ವಿರುದ್ಧ ಮಾಡಲಾದ ದೂರನ್ನು ಕೈಬಿಡುವಂತೆ ವಿನಂತಿಸಿರುತ್ತಾರೆಂದು ತಿಳಿಸಿರುತ್ತಾರೆ.

ಶ್ರೀ ಬಸವರಾಜ ಕೆರೊಳ್ಳಿ, ಕ್ರಿಯೇಟಿವ್ ಟೆಕ್ನಿಕಲ್ ಕನ್ಸಲ್ಟೆಂಟ್ಸ್ (ಮೂರನೇ ಪಾರ್ಟಿ) ಇವರು ಖಾಸಗಿ ವ್ಯಕ್ತಿಯಾಗಿರುವುದರಿಂದ ಇವರನ್ನು ಸದರಿ ಪ್ರಕರಣದಿಂದ ಕೈಬಿಡಲಾಗಿದೆ ಎಂದು ತಿಳಿಸಿರುತ್ತಾರೆ.

ಸದರಿ ದೂರಿಗೆ ಸಂಬಂಧಿಸಿದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಯಾದಗಿರಿ ಇವರ ದಿನಾಂಕ 22.01.2014 ರ ವರದಿ ಹಾಗೂ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಯಾದಗಿರಿ ಇವರ ದಿನಾಂಕ 03.12.2013ರ ವರದಿಯಲ್ಲಿ ಪ್ರಶ್ನಿತ ಕಾಮಗಾರಿಯನ್ನು ಅಂದಾಜು ಪಟ್ಟಿ ಹಾಗೂ ಅಳತೆ ಪುಸ್ತಕದಲ್ಲಿ ನಮೂದಿಸಿರುವಂತೆ ಅನುಷ್ಠಾನಗೊಳಿಸಲಾಗಿದೆಯೆಂದು ವರದಿ ಮಾಡಿರುತ್ತಾರೆಂದು ತಿಳಿಸಿರುತ್ತಾರೆ.

ದೂರುದಾರರಾದ ಶ್ರೀ ವೆಂಕಟೇಶ ನಾಯಕ ರವರು ದಿನಾಂಕ 29.12.2015ರ ಪತ್ರದ ಮೂಲಕ ಲೋಕಾಯುಕ್ತ ಕಚೇರಿಗೆ ಸಲ್ಲಿಸಿದ್ದ ದೂರನ್ನು ಹಿಂಪಡೆದಿರುತ್ತಾರೆಂದು ತಿಳಿಸಿರುತ್ತಾರೆ.

ಮೇಲ್ಕಂಡ ದೂರಿಗೆ ಸಂಬಂಧಿಸಿದಂತೆ ಕರ್ನಾಟಕ ಲೋಕಾಯುಕ್ತ ಕಚೇರಿಯು ತನಿಖೆಯನ್ನು ಕೈಗೊಂಡು ಸಲ್ಲಿಸಿರುವ ವರದಿಯಲ್ಲಿ ಸದರಿ ಕಾಮಗಾರಿಯನ್ನು ಅನುಮೋದನೆಗೊಂಡ ಅಂದಾಜು ಪಟ್ಟಿಯಂತೆ ಅನುಷ್ಠಾನಗೊಳಿಸಲಾಗಿದೆಯೆಂದು, ಈ ಸಂಬಂಧ ಕಾಮಗಾರಿಯ ಅಂದಾಜು ಪಟ್ಟಿ, ಅಳತೆ ಪುಸ್ತಕ ಹಾಗೂ ಛಾಯಾಪ್ರತಿಗಳನ್ನು ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತರವರು ತನಿಖಾ ವರದಿ, ದೂರು, ಆಪಾದಿತರು ಸಲ್ಲಿಸಿರುವ ಆಕ್ಷೇಪಣೆಗಳು, ಮತ್ತು ದಾಖಲಾತಿಗಳನ್ನು ಪರಿಶೀಲಿಸಿದ್ದು, ಪ್ರಶ್ನಿತ ಕಾಮಗಾರಿಯ ಅಳತೆಗಳನ್ನು ಅಳತೆ ಪುಸ್ತಕದಲ್ಲಿ ದಿನಾಂಕ 23.03.2013ರಂದು ದಾಖಲಿಸಲಾಗಿದ್ದು, ಸದರಿ ಕಾಮಗಾರಿಯನ್ನು ಯಾವ ದಿನಾಂಕದಂದು ಪ್ರಾರಂಭಿಸಲಾಗಿದೆ ಎಂಬ ಬಗ್ಗೆಯಾಗಲೀ ಹಾಗೂ ಯಾವ ದಿನಾಂಕದಂದು ಪೂರ್ಣಗೊಳಿಸಲಾಗಿದೆ ಎಂಬ ಬಗ್ಗೆಯಾಗಲೀ ಯಾವುದೇ ಮಾಹಿತಿ ನಮೂದಿಸಿರುವುದಿಲ್ಲವೆಂದು, ತನಿಖಾಧಿಕಾರಿಯವರು 29.90 ಮೀ. ಮತ್ತು 19.20ಮೀ. ಉದ್ದದ ಎರಡು ಚಾನಲ್‌ಗಳನ್ನು ನಿರ್ಮಿಸಿರುವುದನ್ನು ತನಿಖಾ ವರದಿಯಲ್ಲಿ ದಾಖಲಿಸಿದ್ದು, ಆದರೆ, ಈ ಕಾಮಗಾರಿಯ ಅಳತೆಯನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿರುವುದಿಲ್ಲವೆಂದು, ಚಾನಲ್ ಕಾಮಗಾರಿ ಪ್ರಾರಂಭಿಸುವ ಮುನ್ನ ಕೆಪಿಡಬ್ಲ್ಯೂಡಿ ಕಂಡಿಕೆ 110 (2)ರ ಪ್ರಕಾರ ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರಾಗಲೀ ಅಥವಾ ಆಪಾದಿತರಾಗಲೀ ಅಳತೆಗಳನ್ನು ದಾಖಲಿಸಿರುವುದಿಲ್ಲವೆಂದೂ, ಅಂದಾಜು ಪಟ್ಟಿ ಹಾಗೂ ಅಳತೆ ಪುಸ್ತಕದಲ್ಲಿ ನಮೂದಿಸಿರುವಂತೆ 89.50ಮೀ. ಉದ್ದದ ಕೆನಾಲ್‌ನ್ನು ನಿರ್ಮಿಸಲಾಗಿದೆ ಎಂದು ಅಳತೆ ಪುಸ್ತಕದಲ್ಲಿ ದಾಖಲಿಸಲಾಗಿದ್ದು, ಆದರೆ ತನಿಖಾಧಿಕಾರಿಯವರು ಸ್ಥಳ ಪರಿವೀಕ್ಷಣೆ ಸಂದರ್ಭದಲ್ಲಿ 50 ಮೀ. (29.90ಮೀ. + 19.50ಮೀ.) ಉದ್ದದ ಚಾನಲ್‌ನ್ನು ಗಮನಿಸಿರುತ್ತಾರೆಂದು, ಚಾನಲ್‌ನಲ್ಲಿ ನೀರು ತುಂಬಿರುವ

ಕಾರಣ ಹೂಳೆತ್ತುವ ಕಾಮಗಾರಿಯನ್ನು ನಿರ್ವಹಿಸಿರುವುದಿಲ್ಲವೆಂದು, ಕಲ್ಲು ಕಟ್ಟಡದ ಬಾಕ್ಸ್ ತರಹದ ಚಾನಲ್‌ನ್ನು ನಿರ್ಮಿಸಲಾಗಿದೆ ಎಂದು ದಾಖಲಿಸಿರುವುದು ಅನುಮಾನಕ್ಕೆಡೆಮಾಡಿಕೊಡುತ್ತದೆಂದು, ಸದರಿ ಕಾಮಗಾರಿಗೆ ಬಳಸಲಾಗಿರುವ ಸಾಮಗ್ರಿಗಳನ್ನು ಗುಣಪರೀಕ್ಷೆಗೆ ಒಳಪಡಿಸಿಲ್ಲವೆಂದು, ಕಾಮಗಾರಿ ಅನುಷ್ಠಾನಗೊಳಿಸುವ ಮುನ್ನ ಹಾಗೂ ನಂತರದಲ್ಲಿ ತೆಗೆದ ಛಾಯಾಪ್ರತಿಗಳನ್ನು ಒದಗಿಸಿಲ್ಲವೆಂದು, ಕೆಪಿಡಬ್ಲ್ಯೂಡಿ ಕಂಡಿಕೆ 110 (1)(ಬಿ) ಹಾಗೂ 110(2) ನಿಯಮಗಳನ್ನು ಉಲ್ಲಂಘಿಸಿದ್ದಾರೆಂದು, ಇದಕ್ಕೆ ಕಾರಣರಾದ ಶ್ರೀ ಹೊನ್ನೇಶ, ಕಿರಿಯ ಇಂಜಿನಿಯರ್ ಇವರ ವಿರುದ್ಧದ ನಡವಳಿಕೆಯನ್ನು ಕೈ ಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ಅಂಶಗಳು ಕಂಡುಬರುವುದಿಲ್ಲವೆಂದು, ಇವರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರದೆ, ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯ ಲೋಪ ಎಸಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ 3(1)ನ್ನು ಉಲ್ಲಂಘಿಸಿ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುವುದರಿಂದ ಸದರಿಯವರ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸುವ ಸಲುವಾಗಿ ಪ್ರಕರಣವನ್ನು ತಮಗೆ ವಹಿಸುವಂತೆ ಮಾನ್ಯ ಉಪ ಲೋಕಾಯುಕ್ತ-1ರವರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿ ಮತ್ತು ದಾಖಲೆಗಳನ್ನು ಪರಿಶೀಲಿಸಿದೆ. ಪ್ರಕರಣದಲ್ಲಿ ಭಾಗಿಯಾಗಿರುವ ಶ್ರೀ ಹೊನ್ನೇಶ, ಅಂದಿನ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸುರಪುರ ಇವರು ಪ್ರಶ್ನಿತ ಕಾಮಗಾರಿಯನ್ನು ಯಾವ ದಿನಾಂಕದಂದು ಪ್ರಾರಂಭಿಸಿ ಯಾವಾಗ ಮುಕ್ತಾಯಗೊಳಿಸಲಾಗಿದೆ ಎಂಬ ಬಗ್ಗೆ ದಾಖಲೆ / ಮಾಹಿತಿಯನ್ನು ಒದಗಿಸದೇ ಇರುವುದು, ತನಿಖಾ ವರದಿಯಲ್ಲಿ ನಮೂದಿಸಿರುವ ಅಳತೆಗೂ ಹಾಗೂ ಅಳತೆ ಪುಸ್ತಕದಲ್ಲಿ ನಮೂದಿಸಿರುವ ಅಳತೆಗೂ ವ್ಯತ್ಯಾಸವಿರುವುದು, ಕಾಮಗಾರಿ ಅನುಷ್ಠಾನಗೊಳಿಸುವ ಮುನ್ನ ಹಾಗೂ ನಂತರದಲ್ಲಿ ತೆಗೆದ ಛಾಯಾಪ್ರತಿಗಳನ್ನು ಒದಗಿಸದೇ ಇರುವುದು, ಕೆಪಿಡಬ್ಲ್ಯೂಡಿ ಕಂಡಿಕೆ 110 (1)(ಬಿ) ಹಾಗೂ 110(2) ನಿಯಮಗಳನ್ನು ಉಲ್ಲಂಘಿಸಿರುವುದು ದಾಖಲೆಗಳಿಂದ ಕಂಡುಬರುತ್ತದೆ. ಹಾಗಾಗಿ ಸದರಿಯವರು ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ ಹಾಗೂ ಸಂಪೂರ್ಣ ನಿಷ್ಠೆ ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(1)ನ್ನು ಉಲ್ಲಂಘಿಸಿ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುವುದರಿಂದ ಇವರ ವಿರುದ್ಧದ ಆರೋಪದ ಬಗ್ಗೆ ಇಲಾಖಾ ವಿಚಾರಣೆ ನಡೆಸುವುದು ಅವಶ್ಯವಿರುತ್ತದೆ. ಆದ್ದರಿಂದ, ಸದರಿಯವರ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತ-1ರವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ : ಗ್ರಾಅಪ 124 ಇಎನ್‌ಕ್ಯೂ 2016 ಬೆಂಗಳೂರು,**
**ದಿನಾಂಕ. 28.10.2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಹೊನ್ನೇಶ, ಅಂದಿನ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸುರಪುರ (ಹಾಲಿ ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್

ಉಪ ವಿಭಾಗ, ಚಿಂಚೋಳಿ) ಇವರ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರಂತೆ ನಡೆಸುವ ಸಲುವಾಗಿ ಪ್ರಕರಣವನ್ನು ಸದರಿ ನಿಯಮಗಳ ನಿಯಮ 14(ಎ)ರ ಅನುಸಾರ ಮಾನ್ಯ ಉಪಲೋಕಾಯುಕ್ತ-1ರವರಿಗೆ ವಹಿಸಿ ಆದೇಶಿಸಿದೆ:-

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿದ್ದೇಶ್ ಹೊತ್ತಲಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕಲಬುರಗಿ.
7. ಉಪ ನಿಬಂಧಕರು ವಿಚಾರಣೆಗಳು-3, ಕರ್ನಾಟಕ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಶ್ರೀ ಹೊನ್ನೇಶ, ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಚಿಂಚೋಳಿ.
9. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
10. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಸೇವೆಗಳು-ಎ,ಬಿ&ಸಿ).
11. ಸರ್ಕಾರದ ಅಧೀನ ಕಾರ್ಯದರ್ಶಿ, ಗ್ರಾಮ ಪಂಚಾಯತ್ ಶಾಖೆ, ಗ್ರಾ.ಅ.ಪಂ.ರಾಜ್ ಇಲಾಖೆ.
12. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಜಂಟಿ ಕಾರ್ಯದರ್ಶಿ (ಆಡಳಿತ) ಇವರ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು.
13. ಹೆಚ್ಚುವರಿ ಪ್ರತಿ : ರಕ್ಷಾ ಕಡತ : ಕಂಪ್ಯೂಟರ್ ಸೆಲ್.